**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು**

**ಉಪಸ್ಥಿತರುಃ** **ಸುಜಾತ ಸುವರ್ಣ ಬಿ.** ಬಿ.ಕಾಂ.,ಎಲ್‌ಎಲ್‌ಬಿ.,
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕಡೂರು.**

**ಅಸಲು ದಾವೆ ನಂ. 04/2016**

**ದಿನಾಂಕ: 10ನೇ ನವೆಂಬರ್ 2021**

**ವಾದಿಯರು ಃ** ಶ್ರೀ ನಟರಾಜ್ ಕೆ ಎ

ವಿರುದ್ಧ

**ಪ್ರತಿವಾದಿಯರು ಃ** ಶ್ರೀಮತಿ ಹಂಸರತ್ನ ಕೆ ಕೆ ಮತ್ತು ಇತರರು

ಮಧ್ಯಂತರ ಅರ್ಜಿ ಸಂಖ್ಯೆ 12

ಅರ್ಜಿದಾರರು ಃ ನಟರಾಜ್ ಕೆ ಎ

ವಿರುದ್ದ

ಎದುರುದಾರರು ಃ ಶ್ರೀಮತಿ ಹಂಸರತ್ನ ಕೆ ಕೆ ಮತ್ತು ಇತರರು

ಅರ್ಜಿದಾರರು / ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 12 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅರ್ಜಿಯ ಮೇಲಿನ ಆದೇಶ

ಅರ್ಜಿದಾರರು / ವಾದಿ ಮಧ್ಯಂತರ ಅರ್ಜಿ ಸಂಖ್ಯೆ 12 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ವಾದಪತ್ರದ ಪುಟ ಸಂಖ್ಯೆ 4 ರ ಖಂಡಿಕೆ 5 ರ, 2 ನೇ ಸಾಲಿನಲ್ಲಿ 13 ನೇ ನಂತರ ಮತ್ತು 14 ನೇ ಎಂದು ಸೇರಿಸುವುದು ಹಾಗೂ ಅದೇ ಸಾಲಿನಲ್ಲಿ ಪ್ರತಿವಾದಿಯು ಎಂಬುದನ್ನು ತೆಗೆದು ಹಾಕಿ

ಪ್ರತಿವಾದಿಯರು ಎಂದು ಸೇರಿಸುವುದು ಹಾಗೂ 3 ನೇ ಸಾಲಿನಲ್ಲಿ 13 ನೇ ನಂತರ ಮತ್ತು 14 ನೇ ಎಂದು ಸೇರಿಸುವುದು ಹಾಗೂ ಈ ಮೇಲ್ಕಂಡ ಪ್ಯಾರದ 6 ನೇ ಸಾಲಿನಲ್ಲಿ 13 ನೇ ನಂತರ ಮತ್ತು 14 ನೇ ಎಂದು ಸೇರಿಸುವುದು ಹಾಗೂ ಅದೇ ಸಾಲಿನಲ್ಲಿ ಪ್ರತಿವಾದಿಯು ಎಂಬುದನ್ನು ತೆಗೆದುಹಾಕಿ ಪ್ರತಿವಾದಿಯರು ಎಂದು ಸೇರಿಸುವುದು ಹಾಗೂ ಈ ಮೇಲ್ಕಂಡ ಪ್ಯಾರದ 9 ನೇ ಸಾಲಿನಲ್ಲಿ 13 ನೇ ನಂತರ ಮತ್ತು 14 ನೇ ಎಂದು ಸೇರಿಸುವುದು ಹಾಗೂ ಅದೇ ಸಾಲಿನಲ್ಲಿ ಪ್ರತಿವಾದಿಯ ಎಂಬುದನ್ನು ತೆಗೆದು ಹಾಕಿ ಪ್ರತಿವಾದಿಯರ ಎಂದು ಸೇರಿಸುವುದು ಈ ರೀತಿಯಾಗಿ ತಿದ್ದುಪಡಿ ಮಾಡಿಬೇಕೆಂದು ಕೇಳಿಕೊಂಡಿರುತ್ತಾರೆ. ಅಲ್ಲದೇ ವಾದಪತ್ರದ ಪುಟ ಸಂಖ್ಯೆ 5 ರ ಖಂಡಿಕೆ 8 ರ ಪರಿಹಾರದ ಕಾಲಂ (ಇ) ನಂತರ (ಈ) ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 20 ರ ನಿಯಮ 12 ರ ಅಡಿಯಲ್ಲಿ ವಾದಿಗೆ ಮಧ್ಯಕಾಲೀನ ಲಾಭಾಂಶವನ್ನು ನೀಡುವಂತೆ ಆದೇಶಿಸಬೇಕಾಗಿ ಹಾಗೂ ವಾದಪತ್ರದ ದಾವಾ ಅನುಸೂಚಿ ಐಟಂ 10 ರ ನಂತರ ಅರ್ಜಿಯಲ್ಲಿ ಕಾಣಿಸಿರುವಂತಹ 11 ರಿಂದ 18 ರಂತೆ ಆಸ್ತಿಗಳನ್ನು ಸೇರಿಸಲು ಕೇಳಿಕೊಂಡಿರುತ್ತಾರೆ.

2. 14 ನೇ ಪ್ರತಿವಾದಿ ಪರ ವಕೀಲರು ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿ ತಕರಾರಿನಲ್ಲಿ ತಿಳಿಸಿದ ಕಾರಣಗಳಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. 1 ರಿಂದ 12, 15 ಮತ್ತು 16 ನೇ ಪ್ರತಿವಾದಿಗಳ ಪರ ವಕೀಲರು ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ, ಆದ್ದರಿಂದ ಅವರ ಪರ ಯಾವುದೇ ತಕರಾರು ಇಲ್ಲವೆಂದು ತೆಗೆದುಕೊಳ್ಳಲಾಗಿದೆ.

**14 ನೇ ಪ್ರತಿವಾದಿಯವರ ತಕರಾರಿನ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

**ಅರ್ಜಿಯಲ್ಲಿ ಕಾಣಿಸಿರುವಂತಹ 11 ರಿಂದ 18 ನೇ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾಗಿರುವುದಿಲ್ಲ. ಆ ಆಸ್ತಿಯನ್ನು ಅವರ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿದ್ದು, ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ವಾದಿಯು ಸ್ವತಃ ಪ್ರತಿವಾದಿಯವರು ವ್ಯಾಪಾರ ಮಾಡುತ್ತಾರೆಂದು ಒಪ್ಪಿಕೊಂಡಿದ್ದು ಹಾಗೂ ಎಲ್ ಐ ಸಿ ಏಜೆಂಟ್ ಎಂದು ಒಪ್ಪಿಕೊಂಡಿದ್ದು ಆ ಹಣದಿಂದ ಅವರು 11 ರಿಂದ 18 ರ ಆಸ್ತಿಗಳನ್ನು ಅವರ ಹೆಸರಿನಲ್ಲಿ ಖರೀದಿಸಿರುತ್ತಾರೆ. 14 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ಆ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಪಾಲು ಇರುವುದಿಲ್ಲ.**

**13 ನೇ ಪ್ರತಿವಾದಿಯು ದಿನಾಂಕ 10/07/2017 ರಂದು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಆವರು ತಮ್ಮ ಪ್ರತಿವಾದ ಪತ್ರದಲ್ಲಿ ಅರ್ಜಿ ಆಸ್ತಿಗಳನ್ನು ನಮೂದಿಸಿದ್ದು ಆಗ ಈ ಪ್ರತಿವಾದಿಯು ಅದಕ್ಕೆ ಕೌಂಟರ್ ತಕರಾರನ್ನು ಸಲ್ಲಿಸಿದ್ದು ಈಗ ವಾದಿಯು 13 ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ಆಸ್ತಿಗಳನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಈಗಾಗಲೇ ಪಿ ಡಬ್ಲ್ಯು-1 ರವರ ಪಾಟೀ ಸವಾಲು ಮುಗಿದಿದ್ದು ಈ ಹಂತದಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.**

**3.** ವಾದವನ್ನು ಆಲಿಸಲಾಯಿತು.

**4.** ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳು ಃ

**1)** ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವ ತಿದ್ದುಪಡಿ ಮಾಡಲು ತಿಳಿಸಿದಂತಹ ವಿಷಯಗಳು ದಾವೆಯಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಿದೆಯೇ **?**

**2)** ಯಾವ ಆದೇಶ **?**

**5.** ವಾದಿ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಮೌಖಿಕ ಸಾಕ್ಷ್ಯ ಅವರ ಪರ ಇರುವ ದಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ ನಂ. **1** ಃ ಸಕರಾತ್ಮಕವಾಗಿ

ಅಂಶ ನಂ. **2** ಃ ಈ ಕೆಳಕಂತ ಕಾರಣಗಳಿಗಾಗಿ ಅಂತಿಮ ಆದೇಶದಂತೆ

**:: ಕಾರಣಗಳು ::**

**6. ಅಂಶ ನಂ.1 :- ವಾದಿಯು ಪ್ರತಿವಾದಿಯರ ವಿರುದ್ದ ದಾವಾ ಆಸ್ತಿಗಳಲ್ಲಿ ವಿಭಜನೆಯನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.**

**ಮಧ್ಯಂತರ ಅರ್ಜಿ ಸಂಖ್ಯೆ 12 ರಲ್ಲಿ ವಾದಿಯು ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿ ತನ್ನ ತಂದೆಯ ಜೀವಿತ ಕಾಲದಲ್ಲಿ ದಾವಾ ಅನುಸೂಚಿ ಆಸ್ತಿಗಳ ನಿಗಾವಣೆ ಮಾಡುತ್ತಿದ್ದು, ಅವರ ಮರಣದ ನಂತರ 13 ಮತ್ತು 14 ನೇ ಪ್ರತಿವಾದಿಯರು ದಾವಾ ಅನುಸೂಚಿ ಆಸ್ತಿಗಳ ನಿಗಾವಣೆ ಮಾಡುತ್ತಿದ್ದು, ಸದರಿ ಅನುಸೂಚಿ ಆಸ್ತಿಗಳಿಂದ ಬಂದ ಆದಾಯವನ್ನು 13 ಮತ್ತು 14 ನೇ ಪ್ರತಿವಾದಿಗಳು ಪಡೆದುಕೊಂಡು ಸದರಿ ಆದಾಯದ ಬಗೆಗ ಯಾವುದೇ ಲೆಕ್ಕಪತ್ರವನ್ನು ಕೊಟ್ಟಿರುವುದಿಲ್ಲ. ದಾವಾ ಅನುಸೂಚಿ ವರಮಾನವನ್ನು 13 ಮತ್ತು 14 ನೇ ಪ್ರತಿವಾದಿಗಳು ಅನುಭವಿಸುತ್ತಿರುತ್ತಾರೆ. ವಾದಿ ಮುಂದುವರೆದು ತನ್ನ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ 13 ನೇ ಪ್ರತಿವಾದಿಯು ತನ್ನ ಪ್ರತಿವಾದಿ ಪತ್ರದಲ್ಲಿ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸದ ಕಾರಣ ದಾವೆಯು ಊರ್ಜಿತವಾಗತಕ್ಕದ್ದಲ್ಲ ಎಂದು ತಕರಾರು ಮಾಡಿದ್ದು ಆ ಬಗ್ಗೆ ವಿವಾದಾಂಶವು ಸಹ ರಚಿತವಾಗಿರುತ್ತದೆಂದು ದಾಖಲಾತಿಗಳನ್ನು ಗಮನಿಸಿದಾಗ ಅರ್ಜಿಯಲ್ಲಿ ಕಾಣಿಸಿದಂತಹ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ಅವರ ಗಮನಕ್ಕೆ ಬಂದಿರುತ್ತದೆ ಎಂದು ಆದ್ದರಿಂದ ಆ ಆಸ್ತಿಗಳನ್ನು ದಾವೆಯಲ್ಲಿ ಸೇರಿಸುವುದು ಅವಶ್ಯಕತೆ ಇದೆಯೆಂದ ಖಂಡನೆ ತೆಗೆದುಕೊಂಡಿರುತ್ತಾರೆ.**

**7. 14 ನೇ ಪ್ರತಿವಾದಿಯವರು ಆ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಯಾಗಿದ್ದು ಪ್ರತಿವಾದಿಯ ಎಲ್ ಐ ಸಿ ಏಜೆಂಟಾಗಿದ್ದು ಅವರ ಆಸ್ತಿಗಳನ್ನು ಸ್ವಂತ ಸಂಪಾದನೆಯಿಂದ ಖರೀದಿ ಮಾಡಿರುತ್ತಾರೆಂದು ಆ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲವೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ.**

**8. "ಕ್ರಮಾದೇಶ ೬ ನಿಯಮ ೧೭ ರಡಿಯಲ್ಲಿ ನ್ಯಾಯೋಚಿತವಾಗಬಹುದಾದ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ ಯಾವನೇ ಪಕ್ಷಗಾರನು ವಾದ ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ**

ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಕಾರರ ನಡುವೆ ವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತಹ ಎಲ್ಲ ದುರಸ್ತುಗಳನ್ನು ಮಾಡತಕ್ಕದ್ದು ಪರಂತು ಅಧಿ ವಿಚಾರಣೆ ಪ್ರಾರಂಭವಾದ ನಂತರ ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಅಧಿ ವಿಚಾರಣೆಯ ಪ್ರಾರಂಭಕ್ಕೆ ಪೂರ್ವದಲ್ಲಿ ಪಕ್ಷಕಾರರು ಆ ವಿಷಯವನ್ನು ವಾದಿಸುವುದು ಆಗುತ್ತಿರಲಿಲ್ಲ ಎಂಬ ನಿರ್ಣಯಕ್ಕೆ ನ್ಯಾಯಾಲಯವು ಬರದ ಹೊರತು, ತಿದ್ದುಪಡಿಯ ಯಾವುದೇ ಅರ್ಜಿಯನ್ನು ಅನುಮತಿಸತಕ್ಕದಲ್ಲ."

**9. ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ದ ವಿಭಜನೆ ಕೋರಿ ಸಲ್ಲಿಸಿರುತ್ತಾರೆ. 13 ನೇ ಪ್ರತಿವಾದಿಯವರು ತಮ್ಮ ಪ್ರತಿವಾದ ಪತ್ರದಲ್ಲಿ ದಾವೆಯಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸದೆ ಊರ್ಜಿತವಾಗಿರುವುದಿಲ್ಲವೆಂದು ಖಂಡನೆ ತೆಗೆದುಕೊಂಡಿರುತ್ತಾರೆ. ಹೀಗಿರುವಾಗ ಅರ್ಜಿಯಲ್ಲಿ ತೋರಿಸಿದಂತಹ ಆಸ್ತಿಗಳನ್ನು ದಾವೆಯಲ್ಲಿ ಸೇರಿಸದೆ ಇದ್ದಲ್ಲಿ ವಾದಿಗೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ. ಆ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳೇ ಅಥವಾ ಪಿತ್ರಾರ್ಜಿ ಆಸ್ತಿಗಳೇ ಎನ್ನುವುದನ್ನು ಪುರಾವೆಗೊಳಿಸಲು ಖಂಡಿತವಾಗಿಯೂ ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಧಾರಗಳ ಅವಶ್ಯಕತೆ ಇರುತ್ತದೆ. ಒಂದುವೇಳೆ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ವಾದಿಯು ತಿದ್ದುಪಡಿಯನ್ನು ಮಾಡಿದ್ದಲ್ಲಿ ಪ್ರತಿವಾದಿಗಳಿಗೆ ಅದನ್ನು ಅಲ್ಲಗೆಳೆದು ಹೆಚ್ಚುವರಿ ಪ್ರತಿವಾದ ಪತ್ರವನ್ನು ಸಲ್ಲಿಸುವಂತಹ ಅವಕಾಶ ಮತ್ತು ಪಾಟೀ ಸವಾಲು ಮಾಡುವಂತಹ ಅವಕಾಶ ಕೂಡ ಇರುತ್ತದೆ. ವಾದಿಯು ಅರ್ಜಿಯಲ್ಲಿ ನಮೂದಿಸಿದಂತೆ ವಾದಪತ್ರವನ್ನು ತಿದ್ದುಪಡಿ ಮಾಡಿದ್ದಲ್ಲಿ ದಾವೆಯ ಸ್ವರೂಪ ಬದಲಾಗುವುದಿಲ್ಲ ಹಾಗೂ ತಿದ್ದುಪಡಿ ಮಾಡಲು ಕೋರಿದಂತಹ ಅಂಶವು ದಾವೆಯಲ್ಲಿ ತೀರ್ಮಾನಕ್ಕೆ ಬರಲು ಅವಶ್ಯಕವಾಗಿರುತ್ತದೆ. ಈ ದಾವೆಯು ೨೦೧೬ ರ ದಾವೆಯಾಗಿದ್ದು ಅರ್ಜಿಯನ್ನು ಪುರಸ್ಕರಿಸುವಾಗ ಖರ್ಚು ವಿಧಿಸುವುದು ಸೂಕ್ತವೆಂದು ತೀರ್ಮಾನಕ್ಕೆ ಬಂದಿರುತ್ತದೆ. ಆದ್ದರಿಂದ ಅಂಶ ನಂ.1 ನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.**

**10. ಅಂಶ ನಂ.2 : ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.**

**: ಆದೇಶ :**

**ಅರ್ಜಿದಾರರು / ವಾದಿ ಮಧ್ಯಂತರ ಅರ್ಜಿ ಸಂಖ್ಯೆ 12 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ನ್ನು ರೂ.600/- ಖರ್ಚು ವಿಧಿಸಿ ಪುರಸ್ಕರಿಸಲಾಗಿದೆ.**

**(ಸುಜಾತ ಸುವರ್ಣ ಬಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಡೂರು.**